# ಬೂತ್ ವರದಿ ಮೇಲೆ ಫಲಿತಾಂಶ ಲೆಕ್ಕಾಚಾರ!

## ಪರ್ಸಂಟೇಜ್ ಆಧಾರದಲ್ಲೂ ನಡೀತಿದೆ ಗುಣಾಕಾರ, ಭಾಗಾಕಾರ!

■ **ಸುಧಾಕರ ಸುವರ್ಣ** ಮತ್ತೂರು
sudhakara.kannadamoole@timesgroup.com

ಬುಧವಾರ ರಾತ್ರಿ ಹೊತ್ತಿಗೆ ಎಲ್ಲ ಕ್ಷೇತ್ರಗಳ ಮತದಾನದ ಶೇಕಡಾವಾರು ವಿವರ ಸಿಕ್ಕಿದೆ. ರಾಜಕೀಯ ಮೇಲಾಟಗಳ ವಿಶ್ಲೇಷಣಾ ಜಾಣ್ಮೆಯಿರುವ ಮತದಾರರು ಶೇಕಡಾವಾರು ಪೋಲಿಂಗ್ ಆಧಾರದಲ್ಲಿ ಫಲಿತಾಂಶದ ಲೆಕ್ಕಾಚಾರ ಹಾಕುತ್ತಿದ್ದಾರೆ. ಇನ್ನೊಂದೆಡೆ ಪಕ್ಷಗಳು ಬೂತ್ ಮಟ್ಟದಿಂದ ತರಿಸಿಕೊಂಡ ವರದಿಗಳನ್ನು ಮುಂದಿಟ್ಟುಕೊಂಡು ಲೆಕ್ಕಾಚಾರ ಹಾಕುತ್ತಿವೆ.

**ಬೂತ್ ವರದಿ:** ಪ್ರತೀ ಬೂತ್‌ನಲ್ಲಿರುವ ಮತದಾರರ ಲೆಕ್ಕ, ಮತದಾನ ಮಾಡಿದವರ ಲೆಕ್ಕ, ಮಾಡದೇ ಉಳಿದವರ ಲೆಕ್ಕ, ಅವರ ಜಾತಿ, ಸಮುದಾಯದ ವಿವರ, ಮತದಾನ ಮಾಡಿದವರಲ್ಲಿ ತಮ್ಮ ಕಡೆಯವರು ಎಷ್ಟು ಎಂಬುದರ ಅಂದಾಜು ವಿವರ ಇತ್ಯಾದಿಗಳನ್ನು ಒಳಗೊಂಡ ವರದಿ ಪ್ರತೀ ಬೂತ್‌ನಿಂದ ಆಯಾ ಪಕ್ಷಗಳ ಕ್ಷೇತ್ರ ಕಚೇರಿಗೆ ಗುರುವಾರ ಮಧ್ಯಾಹ್ನದ ಒಳಗೆ ತಲುಪಿದೆ. ಈ ರೀತಿಯ ಎಲ್ಲ ಬೂತ್‌ಗಳ ವರದಿಯನ್ನು ಸೇರಿಸಿಕೊಂಡು ಕ್ಷೇತ್ರದ ಫಲಿತಾಂಶ ಯಾವ ರೀತಿ ಬರಬಹುದು ಎಂಬುದನ್ನು ಪಕ್ಷಗಳು ಅಳೆದು ತೂಗುತ್ತಿವೆ.

ಮತದಾನ ಕೇಂದ್ರದೊಳಗೆ ಪ್ರತೀ ಪಕ್ಷಗಳ ಏಜೆಂಟರು ಕುಳಿತಿದ್ದು, ಮತದಾರ ಒಳಗೆ ಬಂದು ಆತನ ಹೆಸರು ಮತ್ತು ಸಂಖ್ಯೆ ಕೂಗಿದ ತಕ್ಷಣ ಪ್ರತೀ ಏಜೆಂಟರು ಇದನ್ನು ಟಿಕ್ ಮಾಡಿಕೊಳ್ಳುತ್ತಾರೆ. ಇದಲ್ಲದೆ ತಮ್ಮಲ್ಲಿರುವ ಇನ್ನೊಂದು ಹಾಳೆಯಲ್ಲಿ ಈ ಮತ ಯಾರಿಗೆ ಬಿದ್ದಿರಬಹುದು ಎಂಬ ಅಂದಾಜು ಲೆಕ್ಕವನ್ನು ನಮೂದಿಸುತ್ತಾ ಸಾಗುತ್ತಾರೆ. ಈ ಲೆಕ್ಕ ನೂರಕ್ಕೆ ನೂರು ಪಕ್ಕಾ ಅಲ್ಲದಿದ್ದರೂ ಮೇಲ್‌ಸ್ತರದ ಊಹೆಗೆ ಅವಕಾಶ ನೀಡುತ್ತದೆ. ನಿಗೂಢವಾಗಿರುವ ಮತದಾರರ ಲೆಕ್ಕವನ್ನು ಪ್ರತ್ಯೇಕವಾಗಿ ನಮೂದಿಸಿಕೊಳ್ಳಲಾಗುತ್ತದೆ.

ಮತದಾನ ಕೇಂದ್ರದೊಳಗೆ ಈ ಲೆಕ್ಕಾಚಾರ ನಡೆಯುತ್ತಿದ್ದರೆ ಮತಕೇಂದ್ರದ ಹೊರಗಿನ ಬೂತ್‌ಗಳಲ್ಲಿ ಕುಳಿತವರು ವೋಟ್ ಮಾಡಲು ಬಾಕಿ ಇರುವ ತಮ್ಮವರನ್ನು ಪತ್ತೆ ಹಚ್ಚಿ ಅವರನ್ನು ಕರೆಸುವ ಕೆಲಸವನ್ನೂ ಮಾಡುತ್ತಾರೆ. ಅಂತಿಮವಾಗಿ ಮತದಾನ ಮುಗಿದ ಬಳಿಕ ರಾತ್ರಿ ಬೂತ್ ಮಟ್ಟದ ಪ್ರಮುಖರು ಅಂದಾಜು ಫಲಿತಾಂಶದ ವರದಿ ಸಿದ್ಧಪಡಿಸುತ್ತಾರೆ. ಇಂಥದೊಂದು ವರದಿ ಗುರುವಾರ ಮಧ್ಯಾಹ್ನದ ಹೊತ್ತಿಗೆ ಪ್ರತೀ ಕ್ಷೇತ್ರದ ಪ್ರತೀ ಪಕ್ಷಗಳ ಪಡಸಾಲೆಯಲ್ಲೂ ತಯಾರಾಗಿದ್ದು, ಫಲಿತಾಂಶದ ಊಹೆ ಮಾಡಲಾಗುತ್ತಿದೆ.

### ಇವಿಎಂ ಭದ್ರತಾ ಕೊಠಡಿಗೆ ಸರ್ಪಗಾವಲು



ಎನ್‌ಐಟಿಕೆಯ ಎಲ್‌ಎಚ್‌ಸಿಎ ಕಾಂಪ್ಲೆಕ್ಸ್ ಕಟ್ಟಡಕ್ಕೆ ಪ್ಯಾರಾ ಮಿಲಿಟರಿ ಪಡೆಗಳಿಂದ ಭದ್ರತೆ.

**ಸುರತ್ಕಲ್:** ಎನ್‌ಐಟಿಕೆ ಮತ ಎಣಿಕೆ ಕೇಂದ್ರದಲ್ಲಿ ಇರಿಸಲಾಗಿರುವ ವಿಧಾನ ಸಭಾ ಚುನಾವಣೆಯ ಇವಿಎಂಗಳಿಗೆ ಗರಿಷ್ಠ ಭದ್ರತೆ ಒದಗಿಸಲಾಗಿದ್ದು, ದಿನದ ಮೂರೂ ಪಾಳಿಗಳಲ್ಲಿ ಪೊಲೀಸ್, ಪ್ಯಾರಾ ಮಿಲಿಟರಿ ಪಡೆಗಳ ಸುಮಾರು 2 ಸಾವಿರ ಸಿಬ್ಬಂದಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಎಲ್‌ಎಚ್‌ಸಿ-ಎ ಕಾಂಪ್ಲೆಕ್ಸ್‌ನ 3 ಕಟ್ಟಡಗಳಲ್ಲಿ ಇವಿಎಂ ಇರಿಸಲಾಗಿದ್ದು ಇಡೀ ಕಟ್ಟಡಗಳ ಸುತ್ತ ಪೊಲೀಸ್ ಪಹರೆ ಹಾಕಲಾಗಿದೆ. ಗುರುವಾರ ಬೆಳಗ್ಗೆ ಜಿಲ್ಲಾಧಿಕಾರಿ ರವಿಕುಮಾರ್ ಸ್ಥಳಕ್ಕೆ ಭೇಟಿ ನೀಡಿದ್ದು, ಅಭ್ಯರ್ಥಿಗಳ ಪ್ರತಿನಿಧಿಗಳ ಸಮ್ಮುಖ ಇವಿಎಂ ಇರಿಸಲಾಗಿರುವ ಭದ್ರತಾ ಕೊಠಡಿಗಳಿಗೆ ಬೀಗಮುದ್ರೆ ಹಾಕಲಾಯಿತು. ಮೇ 13ರಂದು ಅವರ ಸಮ್ಮುಖ ಬೀಗ ಮುದ್ರೆ ತೆರೆಯಲಾಗುವುದು ಎಂದು ಹೇಳಲಾಗಿದೆ. ಇಡೀ ಕಟ್ಟಡಗಳ ಸುತ್ತ ಬೀದಿದೀಪ ಸಿಸಿ ಕ್ಯಾಮೆರಾ ಅಳವಡಿಸಲಾಗಿದ್ದು ಕರೆಂಟ್ ಕೈಕೊಟ್ಟಲ್ಲಿ ಜನರೇಟರ್ ಸಿದ್ಧವಿರಿಕೊಳ್ಳಲಾಗಿದೆ. 3 ಪಾಳಿಗಳ ಜವಾಬ್ದಾರಿ ಮೂವರು ಎಸಿಪಿಗಳಿಗೆ ನೀಡಲಾಗಿದೆ. ವಿಧಾನಸಭಾ ಕ್ಷೇತ್ರ ಮಟ್ಟದ ಪೊಲೀಸರನ್ನು ಆಯಾ ಕಟ್ಟಡಗಳ ಭದ್ರತೆಗೆ ಸೇರಿಸಿಕೊಳ್ಳಲಾಗಿದೆ.

ವೈದ್ಯಕೀಯ ಸೇವೆ ಸಿದ್ಧವಿರಿಸಿಕೊಳ್ಳಲಾಗಿದೆ. ಕ್ಷಣ ಕ್ಷಣದ ಮಾಹಿತಿ ಅಪ್‌ಲೋಡ್ ಮಾಡುವುದಕ್ಕಾಗಿ ಮೂರೂ ಕಟ್ಟಡ ಗಳಿಗೆ ತಲಾ ನೂರು ಜಿಬಿ ಸಾಮರ್ಥ್ಯದ ಇಂಟರ್‌ನೆಟ್ ಬ್ರಾಡ್ ಬ್ಯಾಂಡ್‌ಗಳನ್ನು ಬಿಎಸ್‌ಎನ್‌ಎಲ್ ಒದಗಿಸಿದೆ ಎಂದು ಮೂಲಗಳು ತಿಳಿಸಿವೆ.



ಚುನಾವಣೆಯ ಎವಿಎಂಗಳನ್ನು ಎನ್ ಐಟಿಕೆಯ ದಕ ಜಿಲ್ಲಾ ಮಟ್ಟದ ಮತ ಎಣಿಕೆ ಕೇಂದ್ರದ ಭದ್ರತಾ ಕೊಠಡಿಗೆ ಸ್ಥಳಾಂತರಿಸುವ ಕಾರ್ಯ ಗುರುವಾರ ಮುಂದುವರಿದಿದ್ದು ಜಿಲ್ಲಾಧಿಕಾರಿ ರವಿ ಕುಮಾರ್ ಸ್ಥಳಕ್ಕೆ ಭೇಟಿ ನೀಡಿದರು.



ಚುನಾವಣೆಯ ಎವಿಎಂಗಳನ್ನು ಎನ್‌ಐಟಿಕೆಯ ಮತ ಎಣಿಕೆ ಕೇಂದ್ರದ ಭದ್ರತಾ ಕೊಠಡಿಗೆ ಸ್ಥಳಾಂತರಿಸಿದರು.

### ಪೋಲಿಂಗ್ ಪ್ರಮಾಣದ ಲೆಕ್ಕ

ಅತೀ ಕಡಿಮೆ ಮತದಾನವಾದರೆ ಯಾವ ಪಕ್ಷಕ್ಕೆ ಲಾಭ, ಮಧ್ಯಮ ಗತಿಯಲ್ಲಾದರೆ ಅದರ ಪರಿಣಾಮ ಏನು? ಪೋಲಿಂಗ್ ಹೆಚ್ಚಾದರೆ ಇದರ ಲೆಕ್ಕಾಚಾರ ಹೇಗೆ ಇತ್ಯಾದಿಗಳನ್ನು ಕೂಡ ತಜ್ಞ ರಾಜಕೀಯ ವಿಶ್ಲೇಷಕರು ಮಾಡುತ್ತಾರೆ. ಹಿಂದಿನ ಚುನಾವಣೆಗಳಲ್ಲಾದ ಪೋಲಿಂಗ್ ಪ್ರಮಾಣ, ಅಗ ಬಂದ ಫಲಿತಾಂಶ ಮತ್ತು ಈ ಬಾರಿಯ ಶೇಕಡಾವಾರು ಮತದಾನದ ವಿವರಗಳನ್ನು ತಾಳೆ ಹಾಕಿ ಲೆಕ್ಕಾಚಾರ ಮಾಡಲಾಗುತ್ತಿದೆ.

### ಬೆಟ್ಟಿಂಗ್ ಜಾಲದ ಶಂಕೆ

ಕ್ಷೇತ್ರವಾರು ಫಲಿತಾಂಶದ ಬಗ್ಗೆ ಬೆಟ್ಟಿಂಗ್ ನಡೆಯುತ್ತಿರುವ ಶಂಕೆ ವ್ಯಕ್ತ ವಾಗಿದೆ. ಚುನಾವಣೆಗೆ ಮುನ್ನ ಒಂದು ರೀತಿಯ ಲೆಕ್ಕವಿದ್ದರೆ, ಮತದಾನದ ಬಳಿಕ ಅದು ಇನ್ನಷ್ಟು ನಿಖರ ಮತ್ತು ಪ್ರಖರವಾಗುತ್ತಿದೆ. ಕ್ಷೇತ್ರದ ಫಲಿತಾಂಶ, ರಾಜ್ಯದ ಫಲಿತಾಂಶವನ್ನೂ ಇಲ್ಲಿ ಗಮನಿಸಲಾಗುತ್ತಿದೆ. ಕೇವಲ ವಿಜೇತರ ಮೇಲೆ ಮಾತ್ರ ಬೆಟ್ಟಿಂಗ್ ಪ್ರವೀಣರ ಕುತೂಹಲ ಮೂಡಿದ್ದಲ್ಲ, 2ನೇ ಸ್ಥಾನಕ್ಕೆ ನಿಲ್ಲುವವರ ಬಗ್ಗೆಯೂ ದಾಳ ಉರುಳಿಸಲಾಗುತ್ತಿದೆ.

### ಗಮನ ಸೆಳೆದ ಪುತ್ತೂರು ಕ್ಷೇತ್ರ

ಪ್ರಖರ ತ್ರಿಕೋನ ಸ್ಪರ್ಧೆ ಇರುವ ಪುತ್ತೂರು ಕ್ಷೇತ್ರದ ಫಲಿತಾಂಶದ ಬಗ್ಗೆ ತೀವ್ರ ಕುತೂಹಲ ಮೂಡಿದ್ದು, ಬಿಸಿ ಬಿಸಿ ಚರ್ಚೆಯಾಗುತ್ತಿದೆ. ಬೆಟ್ಟಿಂಗ್ ಕ್ಷೇತ್ರದಲ್ಲೂ ಪುತ್ತೂರಿನ ಚರ್ಚೆ ಪ್ರಮುಖವಾಗಿದೆ. ಬಿಜೆಪಿ, ಕಾಂಗ್ರೆಸ್ ಮತ್ತು ಪಕ್ಷೇತರ ಅರುಣ್ ಪುತ್ತಿಲ ಕಡೆಯವರು ತಮ್ಮ ತಮ್ಮ ಗೆಲುವಿನ ಬಗ್ಗೆ ವಿಶ್ವಾಸ ಹೊಂದಿದ್ದರೂ ಗೆಲ್ಲುವ ಹಾಟ್ ಫೇವರಿಟ್ ಮತ್ತು ಮೊದಲ ರನ್ನರ್ ಅಪ್ ಬಗ್ಗೆ ಇನ್ನಿಲ್ಲದ ಕೌತುಕ ವಿದೆ. 2018ರಲ್ಲಿ ಪುತ್ತೂರಿನಲ್ಲಿ 82.33 ಶೇ. ಮತದಾನವಾಗಿದ್ದರೆ, ಈ ಬಾರಿ ಕಡಿಮೆಯಾಗಿದ್ದು 80.08 ಶೇ. ಪೋಲಿಂಗ್ ಆಗಿದೆ. ಇದು ಕೂಡ ಚರ್ಚೆಗೆ ಕಾರಣವಾಗಿದೆ.

Vijaya Karnataka, Date: 12/05/23 p, no-04